**ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಕೊರಟಗೆರೆ**
**ಸಿ.ಸಿ. ನಂ.77/2019**

| | | |
|---|---|---|
| ಹೆಸರು | : ರಂಗಶ್ಯಾಮಯ್ಯ | ಪಿಡಬ್ಲ್ಯೂ-3 |
| ತಂದೆಯ ಹೆಸರು | : ದೊಡ್ಡಯ್ಯ | ಸಿಡಬ್ಲ್ಯೂ-3 |
| ವಯಸ್ಸು | : 44 ವರ್ಷ | |
| ವೃತ್ತಿ | : ವ್ಯವಸಾಯ | |
| ವಾಸ ಸ್ಥಳ | : ಮಲ್ಲೇಕಾವು ಗ್ರಾಮ | |

**ದಿಃ 19.10.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:**

ಆರೋಪಿಯನ್ನು ನಾನು ನೋಡಿಲ್ಲ. ಸಾಕ್ಷಿಗೆ ಕಡತದಲ್ಲಿನ ಒಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ನಿಪಿ-7 ಎಂದು, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಅಪಘಾತದ ವಿಚಾರದಲ್ಲಿ ನಿಪಿ-7 ಕ್ಕೆ ಸಹಿ ಮಾಡಿರುತ್ತೇನೆ. ಬಸ್ಸಿಗೂ ಮತ್ತು ದ್ವಿಚಕ್ರ ವಾಹನಕ್ಕೆ ಅಪಘಾತವಾಗಿರುತ್ತದೆ. ದ್ವಿಚಕ್ರ ವಾಹನದಲ್ಲಿದ್ದ ವೆಂಕಟೇಶ್ರವರು ಮೃತಪಟ್ಟಿರುತ್ತಾರೆ. ಸಾಕ್ಷಿಯು ವಾಹನಗಳ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿದೆ. ನನ್ನ ಸಮಕ್ಷಮ ಪೊಲೀಸರು ಬಸ್ಸು ಮತ್ತು ದ್ವಿಚಕ್ರ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಪರಿಶೀಲಿಸಿ ಆಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ಆರೋಪಿಯು ಬಸ್ಸನ್ನು ಅತೀವೇಗ ಮತ್ತು ಅಜಾಗರೂ ಕತೆಯಿಂದ ಓಡಿಸಿಕೊಂಡು ಬಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದ ಪರಿಣಾಮ ಅಪಘಾತವಾಗಿ ವೆಂಕಟೇಶ್ ಸ್ಥಳದಲ್ಲೇ ಮೃತಪಟ್ಟಿದ್ದು ಹಾಗೂ ತಿಮ್ಮಯ್ಯನವರು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಆ ದಿನ ಬಸ್ಸಿನ ಚಾಲಕ ಈಗ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು ಶ್ರೀ ಜಿ.ಎಂ.ಕೆ. ವಕೀಲರಿಂದಃ-</u>**

ನಿಪಿ-7 ರಲ್ಲಿನ ಅಂಶಗಳು ನನಗೆ ಗೊತ್ತಿಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

**ಓ.ಹೇ.ಕೇ.ಸರಿ ಇದೆ.**

**ಸಹಿ/-**
**ಸಿ.ಜೆ.ಮತ್ತು ಪ್ರ.ದ.ನ್ಯಾ.ದಂ**
**ಕೊರಟಗೆರೆ**

**ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಕೊರಟಗೆರೆ**
**ಸಿ.ಸಿ. ನಂ.77/2019**

ಹೆಸರು : ದೊಡ್ಡತಾಯಮ್ಮ ಪಿಡಬ್ಲ್ಯೂ-1

ಗಂಡನ ಹೆಸರು : ವೆಂಕಟೇಶ್ ಸಿಡಬ್ಲ್ಯೂ-1

ವಯಸ್ಸು : 41 ವರ್ಷ

ವೃತ್ತಿ : ವ್ಯವಸಾಯ

ವಾಸ ಸ್ಥಳ : ಮಲ್ಲೇಕಾವು ಗ್ರಾಮ

**ದಿಃ 13.07.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:**

ಮೃತ ವ್ಯಕ್ತಿ ವೆಂಕಟೇಶ್ ನನ್ನ ಗಂಡನಾಗಬೇಕು ಹಾಗೂ ಮತ್ತೊಮ್ಮ ಮೃತ ವ್ಯಕ್ತಿ ತಿಮ್ಮಯ್ಯ ನನ್ನ ಮಾವನಾಗಬೇಕು. ದಿಃ25.11.2018 ರಂದು ಸಿದ್ದೇಶ್ವರ ಚೌಟರಿ ಮುಂಭಾಗ ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆ. ಆಗ ನಾನು ನಮ್ಮೂರಿನಲ್ಲಿದ್ದೆ. ವಿಷಯವನ್ನು ನನಗೆ ಚಾಸಾ-2 ರವರು ತಿಳಿಸಿರುತ್ತಾರೆ. ಮಲ್ಲೇಕಾವುನಿಂದ ಕೊರಟಗೆರೆಗೆ ದ್ವಿಚಕ್ರ ವಾಹನದಲ್ಲಿ ನನ್ನ ಗಂಡ ಹಾಗೂ ಮಾವ ಬರುತ್ತಿದ್ದಾಗ ಬಸ್ಸ್ ಬಂದು ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತದೆ. ಅಪಘಾತದಲ್ಲಿ ನನ್ನ ಗಂಡನಿಗೆ ಹೆಚ್ಚು ಗಾಯಗಳು ಆದ ಕಾರಣ ಅವರನ್ನು ಕೊರಟಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಆಗುವುದಿಲ್ಲ ಎಂದ ಕಾರಣ ತುಮಕೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ನನ್ನ ಗಂಡ ಮೃತಪಟ್ಟಿರುತ್ತಾರೆ. ನನ್ನ ಮಾವನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅವರು ದಿಃ26.11.2018 ರಂದು ಮೃತಪಟ್ಟಿರುತ್ತಾರೆ. ಈ ವಿಚಾರವಾಗಿ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಬಸ್ಸನ್ನು ಚಾಲನೆ ಮಾಡುತ್ತಿದ್ದ ವ್ಯಕ್ತಿಯ ತಪ್ಪಿನಿಂದ ಅಪಘಾತವಾಗಿರುತ್ತದೆ. ಈಗ ನೋಡುತ್ತಿರುವ ಛಾಯಾಚಿತ್ರಗಳಲ್ಲಿನ ದ್ವಿಚಕ್ರ ವಾಹನವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ನಂತರ ಸದರಿ ದ್ವಿಚಕ್ರವಾಹನವನ್ನು ಬಿಡುಗಡೆ ಮಾಡಿಸಿಕೊಂಡಿರುತ್ತೇವೆ. ಆ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**ಪಾಟಿಸವಾಲು ಶ್ರೀ ಟಿ.ಕೆ.ಎಂ.ವಕೀಲರಿಂದಃ-**

ಅಪಘಾತವಾದ ದಿನವೇ ದೂರನ್ನು ನೀಡಿರುತ್ತೇನೆ. ನಾನು ಅಪಘಾತವಾದ ವ್ಯಕ್ತಿಗಳನ್ನು ಮೊದಲನೇ ಬಾರಿಗೆ ಕೊರಟಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಚಾಸಾ-2 ರವರು ಹೇಳಿದ ಮೇರೆಗೆ ಅಪಘಾತವಾದ ವಿಚಾರ ನನಗೆ ಗೊತ್ತಾಯಿತು. ಯಾವ ರೀತಿ ಅಪಘಾತವಾಯಿತು ಎಂದು ನಾನು ನೋಡಿರುವುದಿಲ್ಲ. ಸಾಕ್ಷಿಯು ನನಗೆ ಚಾಸಾ-2 ರವರು ಫೋನ್ ಮುಖಾಂತರ ಅಪಘಾತದ ವಿಚಾರ ತಿಳಿಸಿರುತ್ತಾರೆ. ದೂರಿನಲ್ಲಿನ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅಪಘಾತದ ಬಗ್ಗೆ ಬರೆದಿರುತ್ತಾರೆ ಎಂದು ನುಡಿದಿದ್ದಾರೆ.

ಮಧುಗಿರಿ-ಕೊರಟಗೆರೆ ರಸ್ತೆಯಲ್ಲಿ ಸುಮಾರು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಯಾವ ವಾಹನದಿಂದ ಅಪಘಾತವಾಯಿತು ಎಂದು ನನಗೆ ಗೊತ್ತಿಲ್ಲದೇ ಇದ್ದರೂ ಬೇರೆಯವರ ಮಾತು ಕೇಳಿ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

**ಓ.ಹೇ.ಕೇ.ಸರಿ ಇದೆ.**

ಸಹಿ/-

**ಸಿ.ಜೆ.ಮತ್ತು ಪ್ರ.ದ.ನ್ಯಾ.ದಂ**
**ಕೊರಟಗೆರೆ**